ಅಸಲು ದಾವಾ ನಂಃ107/2019
ಪಿ.ಡಬ್ಲ್ಯೂ:04

**ದಿನಾಂಕಃ 10-11-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಹೆಸರು | ಃ | ವಿ ದಯಾನಂದ |
| ತಂದೆ/ ಗಂಡನ ಹೆಸರು | ಃ | ಕೆ ವೀರಣ್ಣ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಪತ್ರ ಬರಹಗಾರರು |
| ವಾಸಸ್ಥಳ | ಃ | ಚಳ್ಳಕೆರೆ |

**ಮುಖ್ಯ ವಿಚಾರಣೆ : ಶ್ರೀ ಟಿ ಟಿ ಎ ವಾದಿ ಪರ ವಕೀಲರಿಂದ**

ನನಗೆ ಮಾನ್ಯ ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ ಆದ್ದರಿಂದ ಮಾನ್ಯ ನ್ಯಾಯಾಲಯದ ಮುಂದೆ ಸಾಕ್ಷ್ಯ ವಿಚಾರಣೆ ನೀಡಲು ಹಾಜರಾಗಿರುತ್ತೇನೆ.

ನಾನು 2011 ರಿಂದ ಇಲ್ಲಿಯವರೆಗೂ ಬಿಕಲ್ಮಂದಾರನಾಗಿ ವೃತ್ತಿಯನ್ನು ನಡೆಸುತ್ತಿದ್ದೇನೆ. ದಿಃ17-06-2013 ರಂದು 1 ರಿಂದ 4 ನೇ ಪ್ರತಿವಾದಿಯರು ವಾದಿಯವರಿಗೆ ನಿಪಿಃ1 ಸ್ಥಿರಾಸ್ತಿಯ ಜಮೀನಿನ ಸ್ವಾಧೀನ ರಹಿತ ಶುದ್ದ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ನಿಪಿಃ1 ರ ಪತ್ರವನ್ನು ನಾನು ತಯಾರಿಸಿರುತ್ತೇನೆ.

ನಿಪಿಃ1 ರ ಪತ್ರಕ್ಕೆ ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಅವರುಗಳೆಂದರೆ ಚಂದ್ರಣ್ಣ ಬಿನ್ ತಿಮ್ಮಪ್ಪ ಮತ್ತು ಪವನ ಬಿನ್ ರಾಮಣ್ಣ ಆಗಿರುತ್ತಾರೆ. ಚಂದ್ರಣ್ಣ ಬಿನ್ ತಿಮ್ಮಪ್ಪರವರ ಸಹಿಯನ್ನು ಈಗಾಗಲೇ ನಿಪಿಃ1 ಬಿ ಎಂದು ಗುರುತಿಸಲಾಗಿರುತ್ತದೆ. ಪವನ ಬಿನ್ ರಾಮಣ್ಣರವರ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ ಸದರಿ ನಿಪಿಃ1 ರಲ್ಲಿರುವ ಸದರಿ ಸಾಕ್ಷಿಯ ಸಹಿಯನ್ನು ಈಗ ನಿಪಿಃ1 ಸಿ ಎಂದು ಗುರುತಿಸಲಾಯಿತು.

ನಿಪಿಃ1 ರ ಪತ್ರವನ್ನು ನಾನು ತಯಾರಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿಃ1 ಡಿ ಎಂದು ಗುರುತಿಸಲಾಯಿತು.

**(ಪ್ರತಿವಾದಿಯರು ಏಕತರ್ಪೆ ಇರುವ ಕಾರಣ ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.